## ಮುಖ್ಯ ಚುನಾವಣಾಧಿಕಾರಿಯವರ ಕಛೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001.

---

ಸಂಖ್ಯೆ: ಸಿಆಸುಇ/51/SVEEP/2023 ದಿನಾಂಕ: 08-04-2024

**ಇವರಿಗೆ**

1. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ನೀರು ಸರಬರಾಜು & ಒಳಚರಂಡಿ ಮಂಡಳಿ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ.
7. ವಿಭಾಗೀಯ ರೈಲ್ವೆ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು.
8. ಮುಖ್ಯ ಅಂಚೆ ಮಹಾ ನಿರೀಕ್ಷಕರು, ಬೆಂಗಳೂರು.
9. ಉಪ ಮಹಾ ನಿರ್ದೇಶಕರು, ಕರ್ನಾಟಕ ವೃತ್ತ ಕಚೇರಿ, ಭಾರತ ಸಂಚಾರ ನಿಗಮ ಲಿ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು, ಭಾರ್ತಿ ಏರಟೆಲ್ ಪ್ರೈ ಲಿ, ಬೆಂಗಳೂರು. ಕರ್ನಾಟಕ ವೃತ್ತ.
11. ವ್ಯವಸ್ಥಾಪಕ ನಿರ್ದೇಶಕರು, ರಿಲಯನ್ಸ್ ಜಿಯೋ ಇನ್ಫೋಕಾಂ ಪ್ರೈ ಲಿ, ಬೆಂಗಳೂರು. ಕರ್ನಾಟಕ ವೃತ್ತ.
12. ನಿರ್ದೇಶಕರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ (ಇ-ಆಡಳಿತ) ಇಲಾಖೆ, ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ, ಬೆಂಗಳೂರು.

**ಮಾನ್ಯರೆ...**

**ವಿಷಯ:** ಸಾರ್ವತ್ರಿಕ ಲೋಕ ಸಭಾ ಚುನಾವಣೆ-2024ರ ಬಗ್ಗೆ ಮತದಾರರಲ್ಲಿ ಮತದಾನ ಮತ್ತು ಚುನಾವಣೆಯ ಬಗ್ಗೆ ಜಾಗೃತಿಗಾಗಿ ಸಂದೇಶಗಳನ್ನು ತಮ್ಮ ಅಧೀನದ ಎಲ್ಲಾ ಇಲಾಖೆಗಳ ಜಾಲತಾಣಗಳ ಮುಖಪುಟಗಳಲ್ಲಿ ವ್ಯಾಪಕ ಪ್ರಚಾರ ಮಾಡುವ ಕುರಿತು.

**ಉಲ್ಲೇಖ:** 1) ಭಾರತ ಚುನಾವಣಾ ಆಯೋಗದ ಪತ್ರಿಕಾ ಪ್ರಕಟಣೆ ಸಂಖ್ಯೆ: No.ECI/PN/23/ 2024, Dated: 16th March, 2024.
2) ದಿನಾಂಕ: 05.04.2024 ರಂದು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿ.

* * * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದ ಪತ್ರದಂತೆ 2024 ರ ಸಾರ್ವತ್ರಿಕ ಲೋಕ ಸಭಾ ಚುನಾವಣೆಯನ್ನು ಘೋಷಣೆ ಮಾಡಲಾಗಿದೆ ಹಾಗೂ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಮತದಾನ ನಡೆಯಲಿದೆ. ಚುನಾವಣಾ ಆಯೋಗದ ಮುಖ್ಯ ಉದ್ದೇಶ ಎಲ್ಲಾ ಅರ್ಹ ಮತದಾರರು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮತದಾನ ಮಾಡುವ ಮೂಲಕ ಉತ್ತಮ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೊಳಿಸಿ ಬಲಪಡಿಸುವುದಾಗಿದೆ. ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಮತದಾರರಿಗೂ ಚುನಾವಣೆ ಮತ್ತು ಮತದಾನದ ಬಗ್ಗೆ ವಿವಿಧ ಜಾಗೃತಿ ಸಂದೇಶಗಳ ಮೂಲಕ ಪ್ರಜಾಪ್ರಭುತ್ವದ ಹಬ್ಬವನ್ನು ಆಚರಿಸಲು ಭಾರತ ಚುನಾವಣಾ ಆಯೋಗವು ಸೂಚಿಸಿರುತ್ತದೆ.

ಅದರಂತೆ, ಮತದಾನದ ಮಹತ್ವ ಹಾಗೂ ಮತದಾನದ ದಿನಾಂಕ ಮತ್ತು ಸಮಯದ ಕುರಿತು, ಮತದಾರರಿಗೆ ಆಯೋಗದ ವತಿಯಿಂದ ನೀಡಿರುವ ವಿವಿಧ ಸೌಲಭ್ಯಗಳು ಮತ್ತು ಅಪ್ಲಿಕೇಷನ್‌ಗಳು, ಈ ಬಾರಿಯ ಚುನಾವಣಾ ಧ್ಯೇಯ ವಾಕ್ಯ **"ಚುನಾವಣಾ ಪರ್ವ, ದೇಶದ ಗರ್ವ"** ಮತ್ತು **ಚುನಾವಣಾ ಚಿಹ್ನೆ**ಯ ಕುರಿತು ಮತದಾರರಲ್ಲಿ ಹೆಚ್ಚಿನ ಅರಿವು ಮೂಡಿಸಬೇಕಾಗಿರುತ್ತದೆ. ಈ ಕೆಳಗಿನ **ಘೋಷ ವಾಕ್ಯಗಳಾದ**

**"ಮತದಾನದ ದಿನಾಂಕ: 26.04.2024 (ಎರಡನೇ ಹಂತ) & 07.05.2024** ರಂದು **(ಮೂರನೇ ಹಂತ)**
**ಸಮಯ: ಬೆಳಗ್ಗೆ 07-00 ರಿಂದ ಸಂಜೆ 06-00 ರವರೆಗೆ"**

1) "ಯಾವುದೇ ಮತದಾರ ಮತದಾನದಿಂದ ಹೊರಗುಳಿಯಬಾರದು",

2) “ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುವೆ”,
3) “ನನ್ನ ಮತ, ನನ್ನ ಹೆಮ್ಮೆ”,
4) “ಒಳಗೊಳ್ಳುವ, ಸುಗಮ, ಭಾಗವಹಿಸುವ & ನೈತಿಕ ಚುನಾವಣೆಗಳು”,
5) “ಪ್ರಜಾಪ್ರಭುತ್ವದಲ್ಲಿ ಪ್ರತಿ ಮತವೂ ಅಮೂಲ್ಯ”,
6) “ನಮ್ಮ ನಡೆ ಮತಗಟ್ಟೆಯ ಕಡೆ”,
7) “ಪ್ರಜಾಪ್ರಭುತ್ವದಲ್ಲಿ ಮತದಾನವೇ ಹಬ್ಬ”,
8) “ನನ್ನ ಮತ ದೇಶಕ್ಕೆ ಹಿತ”
9) “ಮತದಾನ ಮಾಡುವುದು ಹೆಮ್ಮೆಯ ವಿಷಯ”
10) “ನಿಮ್ಮ ಒಂದು ಮತ ಸುಭದ್ರ ಪ್ರಜಾಪ್ರಭುತ್ವಕ್ಕಾಗಿ”
12) “ಪ್ರಜಾಪ್ರಭುತ್ವದಲ್ಲಿ ಮತದಾರರೇ ಪ್ರಭುಗಳು”
13) “ಆಮಿಷಕ್ಕೊಳಗಾಗದಿರಿ, ಆತ್ಮ-ಸ್ಥೈರ್ಯದಿಂದ ಮತ ಚಲಾಯಿಸಿ”
14) “ಮಾಡಿ, ಮಾಡಿ ಮತದಾನ, ಇರಲಿ ದೇಶದ ಮೇಲೆ ಅಭಿಮಾನ”
15) “ಮತದಾನ ಮಹಾದಾನ”

ಇತ್ಯಾದಿಗಳ ಕುರಿತು ತಮ್ಮ ಅಧೀನದ ಎಲ್ಲಾ ಇಲಾಖೆಗಳ ಜಾಲತಾಣಗಳ ಮುಖಪುಟಗಳಲ್ಲಿ ಹಾಗೂ ಸಂಬಂಧಿತ ಅಧಿಕೃತ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಕಟಿಸುವ ಮೂಲಕ ಮತ್ತು ಕಛೇರಿಗಳ ಆವರಣಗಳಲ್ಲಿ, ಆಯಕಟ್ಟಿನ ಜನನಿಬಿಡ ಪ್ರದೇಶಗಳಲ್ಲಿ ಪೋಸ್ಟರ್, ಬ್ಯಾನರ್, ಹೋರ್ಡಿಂಗ್ಸ್‌ಗಳನ್ನು ಅಳವಡಿಸುವ ಮೂಲಕ ಹಾಗೂ ಸಂದರ್ಭಾನುಸಾರ/ಅವಕಾಶವಿದ್ದಲ್ಲಿ ಸಂದೇಶಗಳನ್ನು ಸಹ ಕಳುಹಿಸಲು ಕ್ರಮ ವಹಿಸಬಹುದಾಗಿದ್ದು, ಈ ಸಂಬಂಧ ಈ ಕೆಳಗಿನ Google Drive link: https://drive.google.com/drive/folders/1M7yIlzcfwdT1mk-sTjrCbAdJ_Q5dhR5W?usp=drive_link ನಿಂದ ಡೌನ್‌ಲೋಡ್ ಮಾಡಿಕೊಂಡು ವ್ಯಾಪಕ ಪ್ರಚಾರ ಮಾಡುವಂತೆ ಕೋರಿದೆ.

ತಮ್ಮ ವಿಶ್ವಾಸಿ

(ಕೂರ್ಮಾ ರಾವ್. ಎಂ)
ಅಪರ ಮುಖ್ಯ ಚುನಾವಣಾಧಿಕಾರಿಗಳು
ಸಿ.ಆ.ಸು.ಇಲಾಖೆ (ಚುನಾವಣೆಗಳು)